ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಆಗಸ್ಟ್ 1995 ರಂದು ಅಂತ್ಯದೊಳಗೆ ಪ್ರವೇಶಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) 1993ರ ಕರ್ನಾಟಕ ಇಂಜಿನಿಯರಿಂಗ್ ವೈದ್ಯಕೀಯ ದಂತ ಕಾಲೇಜುಗಳ ಪ್ರವೇಶ ನಿಯಮಗಳ ಪ್ರಕಾರ ಪ್ರವೇಶವನ್ನು ಮಾಡಲಾಗುವುದು.

ಪ್ರವೇಶ ನೀತಿಯ ಬಗ್ಗೆ ಹಾಲಿ ಇರುವ ನಿಯಮಗಳ ಅಡಿ ಇರುವ ತೊಂದರೆಗಳ ಬಗ್ಗೆ ರಾಜ್ಯದ ಅಭಿಪ್ರಾಯ ಕೋರಿ ಸರ್ವೋಚ್ಚ ನ್ಯಾಯಾಲಯ ದಿನಾಂಕ 31-7-95 ರವರೆಗೆ ಮನವಿ ಸಲ್ಲಿಸಲು ಅವಕಾಶ ನೀಡಿತ್ತು. ಈ ಬಗ್ಗೆ ಸರ್ಕಾರವು ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ಏಕ ರೀತಿಯ ಪ್ರವೇಶ ನೀತಿಯನ್ನು ಅಳವಡಿಸುವ ಬಗ್ಗೆ ರಾಜ್ಯ ಸರ್ಕಾರವು ಅಭಿಪ್ರಾಯ ಸಲ್ಲಿಸಿದೆ. ಈ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಮಾನಕ್ಕನುಗುಣವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ರಾಷ್ಟ್ರೀಯ ಕ್ರೀಡೆಗಳಿಗಾಗಿ ಬೆಂಗಳೂರಿನಲ್ಲಿ ಆಗಬೇಕಾದ ಸಿದ್ಧತೆಗಳು

134 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿ 1996ನೇ ಜನವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಕೈಗೊಂಡಿರುವ ಸ್ಟೇಡಿಯಂ ನಿರ್ಮಾಣದ ಕೆಲಸಗಳ ಪ್ರಗತಿ ಬಗ್ಗೆ ವಿವರ ನೀಡುವುದು.

ಆ) ಕೋರಮಂಗಲದಲ್ಲಿ ಈ ಸಂಬಂಧವಾಗಿ ಕಟ್ಟುತ್ತಿರುವ ಮನೆಗಳು ಯಾವಾಗ ಪೂರ್ಣಗೊಳ್ಳುವುದು?

ಇ) ರಾಜ್ಯ ಸರ್ಕಾರ ರಾಷ್ಟ್ರೀಯ ಕ್ರೀಡೆಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಈ) ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ಮೊತ್ತವೆಷ್ಟು?@QUE = I) ರಾಷ್ಟ್ರೀಯ ಕ್ರೀಡೆಗಾಗಿ ಇತರೆ ಸಿದ್ಧತೆಗಳ ಬಗ್ಗೆ ಪೂರ್ಣ ವಿವರ ನೀಡುವುದು.

ಊ) 1996ರಲ್ಲಿ ಅಟ್ಲಾಂಟದಲ್ಲಿ ನಡೆಯಲಿರುವ ಒಲಂಪಿಕ್ಸ್ ಕ್ರೀಡೆಗಳ ಸಂಬಂಧವಾಗಿ ರಾಷ್ಟ್ರೀಯ ಕ್ರೀಡೆಗಳನ್ನು ಮುಂದೂಡದ ಸಾಧ್ಯತೆಗಳಿವೆಯೇ?

ಶ್ರೀ ಅಜಯ ಕುಮಾರ್ ಸರ್ ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಶ್ರೀ ಕಂಠೀರವ ಕ್ರೀಡಾಂಗಣದ ನವೀಕರಣ

1996ನೇ ಜನವರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕ್ರೀಡೆಗಳಿಗಾಗಿ ಸ್ಟೇಡಿಯಂ ನಿರ್ಮಾಣದ ಕೆಲಸಗಳ ವಿವರಗಳು :

1) ಶ್ರೀ ಕಂಠೀರವ ಕ್ರೀಡಾಂಗಣವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲು 8.82 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ಕೈಗೊಂಡಿದ್ದು ಸದರಿ ಕೆಲಸವನ್ನು ಎಸ್.ವಿ.ಇ.ಸಿ. ನಿರ್ಮಾಣ ಸಂಸ್ಥೆಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದೆ. ಸದರಿ ಕಟ್ಟಡಕ್ಕೆ ವೈಲ್ ಪೌಂಡೇಷನ್ ಅಳವಡಿಸಲಾಗಿದ್ದು, ಪೌಂಡೇಸನ್ ಕೆಲವು ಪೂರ್ತಿಗೊಂಡಿದ್ದು, ಪೂರ್ವ ಉತ್ತರ ಮತ್ತು ದಕ್ಷಿಣ ಭಾಗದ ಗ್ಯಾಲರಿ ಕಾಮಗಾರಿ ವಿವಿಧ

ಹಂತದಲ್ಲಿ ಇರುತ್ತದೆ. ವಿದ್ಯುಚ್ಛಕ್ತಿ ಒದಗಿಸಲು ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಕೆಲಸವನ್ನು 1995ನೇ ನವೆಂಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು. ಮತ್ತು ಸಿಂಥೆಟಿಕ್ ಟ್ರ್ಯಾಕ್ ಕೆಲಸವನ್ನು ಡಿಸೆಂಬರ್ ತಿಂಗಳಲ್ಲಿ ಪೂರ್ಣಗೊಳಿಸಿ ಜನವರಿಯಲ್ಲಿ ಕ್ರೀಡೆಗಳು ಪ್ರಾರಂಭವಾಗುವ ಹೊತ್ತಿಗೆ ಪೂರ್ತಿ ಸಜ್ಜುಗೊಳಿಸಲಾಗುವುದು.

ಸದರಿ ಕೆಲಸಕ್ಕೆ ಜುಲೈ 1995ರ ಅಂತ್ಯದವರೆಗೆ ಒಟ್ಟು 3.45 ಕೋಟಿ ರೂಪಾಯಿಗಳಷ್ಟು ವೆಚ್ಚವಾಗಿರುತ್ತದೆ.

2) **ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ 4000 ಆಸನಗಳ ಸಾಮರ್ಥ್ಯದ ಕ್ರೀಡಾಂಗಣದ ನಿರ್ಮಾಣ**

ಶ್ರೀ ಕಂಠೀರವ ಕ್ರೀಡಾಂಗಣದ ಆವರಣದಲ್ಲಿ 4000 ಆಸನಗಳ ಸಾಮರ್ಥ್ಯದ ಒಳಾಂಗಣ ಕ್ರೀಡಾಂಗಣವನ್ನು 4.00 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಸದರಿ ಕೆಲಸವನ್ನು ಲಾರ್ಸನ್ ಮತ್ತು ಟೂಬ್ರೊ ಕಂಪನಿಗೆ ಟೆಂಡರ್ ಆಧಾರದ ಮೇಲೆ ವಹಿಸಿ ಕೊಡಲಾಗಿದೆ. ಸದರಿ ಕ್ರೀಡಾಂಗಣಕ್ಕೆ ಪೈಲ್ ಫೌಂಡೇಶನ್ ಅಳವಡಿಸಲಾಗಿದ್ದು, ಫೌಂಡೇಶನ್ ಕೆಲವು ಪೂರ್ಣಗೊಂಡಿದೆ. ಕಾಲಂ ಕೆಲಸ ಮತ್ತು 20 ಅಡಿ ಎತ್ತರದಲ್ಲಿ ಹಾಕುತ್ತಿರುವ ರಿಂಗ್ ಬೀಮ್ ಕೆಲಸವು ಪ್ರಗತಿಯಲ್ಲಿ ಇರುತ್ತದೆ. ಸ್ಥಳದಲ್ಲಿಯೇ ನಿರ್ಮಿಸುತ್ತಿರುವ (ಕ್ಯಾಸ್ಟ್-ಇನ್-ಸೀಟು) ಗ್ಯಾಲರಿ ಕೆಲಸ ಪ್ರಗತಿಯಲ್ಲಿದ್ದು, ಛಾವಣಿಗೆ ಉಪಯೋಗಿಸುವ ಪ್ರೋಟ್ಟಡ್ ಪ್ಲೇಟ್ ಪ್ರೇ ಕ್ಯಾಸ್ಟಿಂಗ್ ಕಾರ್ಯ ನಡೆಯುತ್ತಿದ್ದು, ಸದರಿ ಕ್ರೀಡಾಂಗಣವು ಡಿಸೆಂಬರ್ ಕೊನೆಯ ಹೊತ್ತಿಗೆ ಪೂರ್ಣಗೊಳ್ಳುವುದು.

3) **ಕೋರಮಂಗಲದಲ್ಲಿ 2000 ಆಸನಗಳ ಸಾಮರ್ಥ್ಯದ ಒಳಾಂಗಣ ಕ್ರೀಡಾಂಗಣ ನಿರ್ಮಾಣ :**

ಒಳಾಂಗಣ ಕ್ರೀಡೆಗಳನ್ನು ನಡೆಸಲು ಅನುಕೂಲವಾಗುವಂತೆ 6.61 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕೋರಮಂಗಲದಲ್ಲಿ 2000 ಆಸನಗಳ ಸಾಮರ್ಥ್ಯದ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಕ್ರಮ ಕೈಗೊಂಡಿದ್ದು, ಕೆಲಸವನ್ನು ಟೆಂಡರ್ ಅಧಾರದ ಮೇಲೆ ಭಂಡಾರಿ ಬಿಲ್ಡರ್ಸ್ (ಪ್ರೈ) ಲಿ., ಇವರಿಗೆ ವಹಿಸಿಕೊಡಲಾಗಿದೆ. ಈ ಕ್ರೀಡಾಂಗಣದ ತಳಪಾಯದ ಕೆಲಸಕ್ಕೆ ಪೈಲ್ ಫೌಂಡೇಶನ್ ಅಳವಡಿಸಿಕೊಳ್ಳಲಾಗಿದೆ. ಈ ಕ್ರೀಡಾಂಗಣದಲ್ಲಿ ನೆಲ ಮತ್ತು ಮೊದಲ ಅಂತಸ್ತುಗಳಿದ್ದು, ಛಾವಣಿಗೆ ಸ್ಪೀನ್ ಪ್ರೇಮ್ಸ್ ಅಳವಡಿಸಲಾಗುವುದು. ಇದುವರೆವಿಗೂ ತಳಪಾಯದ ಕೆಲಸ ಮುಗಿದಿರುತ್ತದೆ. ನೆಲ ಅಂತಸ್ತಿನ ಕಾಲಂಗಳು ಮುಗಿದ್ದು, ಛಾವಣಿಗೆ ಕಾಂಕ್ರೀಟ್ ಹಾಕುವ ಕೆಲಸ ಅರ್ಧಭಾಗ ಮುಗಿದಿರುತ್ತದೆ. ನೆಲ ಅಂತಸ್ತಿನ ಇಟ್ಟಿಗೆ ಕಟ್ಟಡದ ಕೆಲಸ ಪ್ರಗತಿಯಲ್ಲಿ ಇರುತ್ತದೆ.

4) **ಅಕ್ಕಿ ತಿಮ್ಮನಹಳ್ಳಿಯಲ್ಲಿ ನಿರ್ಮಾಣ ಮಾಡುತ್ತಿರುವ ಹಾಕಿ ಕ್ರೀಡಾಂಗಣ:**
ಹಾಲಿ ಇರುವ ಹಾಕಿ ಕ್ರೀಡಾಂಗಣದ ಉತ್ತರ ಭಾಗದಲ್ಲಿ ಪವಿಲಿಯನ್ ನಿರ್ಮಾಣ ಹಾಗೂ ದಕ್ಷಿಣ ಭಾಗದಲ್ಲಿ ಇರುವ ಗ್ಯಾಲರಿಯನ್ನು ಅಭಿವೃದ್ಧಿ ಪಡಿಸಲು 2.21 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಸದರಿ ಕೆಲಸವನ್ನು ಟೆಂಡರ್ ಆಧಾರದ ಮೇಲೆ ಶ್ರೀ ಟಿ.ವಿ. ರಾಮಕೃಷ್ಣ ರೆಡ್ಡಿ ಇವರಿಗೆ ವಹಿಸಿಕೊಡಲಾಗಿದೆ. ಉತ್ತರ ಭಾಗದ ಪೆವಿಲಿಯನ್ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿ ಇದ್ದು, ಫೌಂಡೇಶನ್ ಕೆಲಸ ಪೂರ್ತಿಯಾಗಿರುತ್ತದೆ. ಮತ್ತು

ಸುಮಾರು 1/3ಭಾಗಕ್ಕೆ ಭಾವಣೆ ಹಾಕುವ ಕೆಲಸವು ಮುಕ್ತಾಯ ಹಂತದಲ್ಲಿದ್ದು, ಉಳಿದ ಕೇಸ್ ಅಂದರೆ ಕಾಲಂಗಳು ಗ್ಯಾಲರಿ ನಿರ್ಮಾಣ ಕಾರ್ಯ, ಪೋರ್ಟಿಕೋ ನಿರ್ಮಾಣ ಕಾರ್ಯಗಳು ವಿವಿಧ ಹಂತದಲ್ಲಿದ್ದು ಸದರಿ ಕೆಲಸವನ್ನು ನವೆಂಬರ್ ತಿಂಗಳಲ್ಲಿ ಪೂರ್ತಿ ಗೊಳಿಸಲಾಗುವುದು. ಸಿಂಡೆಟಿಕ್ ಟ್ರ್ಯಾಕ್‌ನ್ನು ಡಿಸೆಂಬರ್ ತಿಂಗಳಲ್ಲಿ ಅಳವಡಿಸಿ, 1996ನೇ ಕ್ರೀಡೆಗಳಿಗೆ ಕ್ರೀಡಾಂಗಣವನ್ನು ಸಜ್ಜುಗೊಳಿಸಿಲಾಗುವುದು. ಸದರಿ ಕೆಲಸಕ್ಕೆ ಇಲ್ಲಿಯವರೆಗೆ 42.00 ಲಕ್ಷ ರೂಪಾಯಿಗಳು ಖರ್ಚುನ್ನು ಮಾಡಲಾಗಿದೆ.

5) ಹೊಂಬೋಗೌಡನಗರದಲ್ಲಿರುವ ಮಹಾನಗರಪಾಲಿಕೆಯ ಆಟದ ಮೈದಾನದಲ್ಲಿ ಗ್ಯಾಲರಿ ನಿರ್ಮಾಣದ ಕೆಲಸ :

ಈ ಕೆಲಸವನ್ನು 40.47ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಆಸ್ತಿವಾರು ಕೆಲಸ ಮುಗಿದಿದ್ದು, ಕಾಲಂಗಳ ಕೆಲಸ ಪ್ರಗತಿಯಲ್ಲಿರುತ್ತದೆ. ಕೆಲಸವನ್ನು ನವೆಂಬರ್ ತಿಂಗಳಿನೊಳಗೆ ಮುಗಿಸಲಾಗುವುದು.

6) **ಸುಲೇವಾನ್ ಪೋಲಿಸ್ ಮೈದಾನದಲ್ಲಿ ಎ.ಐ.ಪಿ. ಗ್ಯಾಲರಿ ಮತ್ತು ಕೊಠಡಿಗಳ ನಿರ್ಮಾಣ :**

ಈ ಕೆಲವು ಕಾಮಗಾರಿಯನ್ನು 37.33 ಲಕ್ಷ ರೂಪಾಯಿಗಳ ಅಂದಾಜಿಯಲ್ಲಿ ಟೆಂಡರ್ ಮೂಲಕ ತೆಗೆದುಕೊಳ್ಳಲಾಗಿದೆ. ರಾಷ್ಟ್ರೀಯ ಕ್ರೀಡೆಗಳು ನಡೆಯುವ ಸಂದರ್ಭದಲ್ಲಿ ಈ ಮೈದಾನದಲ್ಲಿ ಬಾಕ್ಸಿಂಗ್ ಸ್ಪರ್ಧೆಯನ್ನು ನಡೆಸುವುದಕ್ಕಾಗಿ 750 ಆಸನಗಳ ಎ.ಐ.ಪಿ. ಗ್ಯಾಲರಿಯನ್ನು ಮತ್ತು ಬದಲಾವಣೆ ಕೊಠಡಿಗಳನ್ನು ನಿರ್ಮಿಸಲಾಗುತ್ತದೆ. ತಳಪಾಯದ ಕೆಲಸ ಮುಗಿದಿದ್ದು, ಇಟ್ಟಿಗೆ ಕಟ್ಟಡದ ಕೆಲಸವು ಕಿಟಕಿ ಮಟ್ಟದವರೆಗೆ ಬಂದಿದ್ದು, ಗ್ಯಾಲರಿ ನಿರ್ಮಾಣ ಪ್ರಗತಿಯ ಲ್ಲಿದೆ.

7) **ಬೆಂಗಳೂರು ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆಯಲ್ಲಿರುವ ಗುರುನಾನಕ್ ಭವನಕ್ಕೆ ಅಭಿವೃದ್ಧಿ ಕೆಲಸ :**

ಈ ಕಾಮಗಾರಿಯನ್ನು 11.12 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಟೆಂಡರ್ ಮೂಲಕ ತೆಗೆದುಕೊಳ್ಳಲಾಗಿದೆ. ಕ್ರೀಡೆಗಾಗಿ ಸ್ಟೇಜ್ ನಿರ್ಮಾಣ, ಶೌಚಾಲಯ, ಇತ್ಯಾದಿ ಅವಶ್ಯ ಕೆಲಸಗಳು ವಿವಿಧ ಹಂತದಲ್ಲಿದ್ದು ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಡಿಸೆಂಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು.

ಆ) ಕೋರಮಂಗಲದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಗೃಹ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು, ರಾಷ್ಟ್ರೀಯ ಕ್ರೀಡೆಗಳು ಪ್ರಾರಂಭವಾಗುವ ವೇಳೆಗೆ 1200 ಮನೆಗಳು ಸಿದ್ಧವಾಗುವ ಸಂಭವವಿರುತ್ತದೆ.

ಇ) ರಾಜ್ಯ ಸರ್ಕಾರವು ಇಲ್ಲಿಯವರೆವಿಗೂ $6\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತದೆ.

ಈ) ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಯಾವುದೇ ರೀತಿಯ ಧನ ಸಹಾಯ ಬಂದಿರುವುದಿಲ್ಲ.

ಉ) ರಾಷ್ಟ್ರೀಯ ಕ್ರೀಡೆಗಳಿಗಾಗಿ 'ನಂದು' ಎಂಬ ಲಾಂಛನವನ್ನು ಆಯ್ಕೆ ಮಾಡಲಾಗಿದೆ. ಈ ಕ್ರೀಡೆಗಳನ್ನು ನಡೆಸಲು ರಾಷ್ಟ್ರೀಯ ಸಂಸ್ಥೆಗಳ ಸಭೆಯನ್ನು ನಡೆಸಿ, ರಾಷ್ಟ್ರೀಯ ಕ್ರೀಡೆಗಳಿಗೆ ಅವಶ್ಯವಿರುವ ತಾಂತ್ರಿಕ ವ್ಯವಸ್ಥೆಯೊಂದಿಗೆ ಒಪ್ಪಿಗೆಯನ್ನು ಪಡೆಯಲಾಗಿದೆ. ಪ್ರಾಯೋಜಕರಿಂದ ಧನಸಹಾಯವನ್ನು ಶೇಖರಿಸಲು ಪೂರ್ವಭಾವಿ

ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದಾಯ ವಿನಾಯಿತಿ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಉಳಿದಂತಹ ಸಿದ್ಧತಾ ಕಾರ್ಯಕ್ರಮಗಳ ಬಗ್ಗೆ ಉಪ ಸಮಿತಿಗಳನ್ನು ಸದ್ಯದಲ್ಲೇ ರಚಿಸಲಾಗುವುದು.

ಊ) ಸಾಧ್ಯತೆಯಿರಲಿಲ್ಲ.

ಹುಳಿಯೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಮಂಜೂರಾತಿ

561 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ತುಮಕೂರು ಜಿಲ್ಲೆ ಹುಳಿಯಾರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗಾಗಿ ನಿವೇಶನವನ್ನು ದಾನಿಗಳಿಂದ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *199-96ನೇ ಸಾಲಿನ ಅಯವ್ಯಯದಲ್ಲಿ ಕಟ್ಟಡದ ನಿರ್ಮಾಣಕ್ಕಾಗಿ ಹಣ ಒದಗಿಸಿ ಕಟ್ಟಡ ನಿರ್ಮಾಣಕ್ಕಾಗಿ ಸಹಾಯ ಮಾಡಲಾಗುವುದೇ;*

ಇ) *ಹಾಗಿದ್ದಲ್ಲಿ, ಈ ಪ್ರಸಕ್ತ ಸಾಲಿನಲ್ಲಿ ಸದರಿ ಕಟ್ಟಡ ನಿರ್ಮಾಣವನ್ನು ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಬಂದಿದೆ

ಆ) ಕಟ್ಟಡ ನಿರ್ಮಾಣದ ಅಂದಾಜು ಪಟ್ಟಿ ಮತ್ತು ನಕ್ಷೆ ಸ್ವೀಕೃತವಾದ ನಂತರ ಪರಿಶೀಲಿಸಲಾಗುವುದು.

ಇ) 1995-96ನೇ ಸಾಲಿನ ಅಯವ್ಯಯದಲ್ಲಿ ಯಾವುದೇ ಹೊಸ ಕಾಮಗಾರಿಗಳಿಗೆ ಅನುದಾನವಿರುವುದಿಲ್ಲ.

ಬರಡು ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವುದರಿಂದ ಉಂಟಾದ ತೊಂದರೆ

570 - ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದ ಬರಡು ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ;*

ಆ) *ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವುದರಿಂದ ಅರಣ್ಯ ಭೂಮಿಯ ಪ್ರಮಾಣ ಕಡಿಮೆಯಾಗುವುದರ ಜೊತೆಗೆ ಪರಿಸರ ಅಸಮತೋಲನ ಉಂಟಾಗುವುದರಿಂದ ಇಂತಹ ಭೂಮಿಯನ್ನು ಅರಣ್ಯ ಬೆಳೆಸಲು ಅಭಿವೃದ್ಧಿ ಪಡಿಸಲಾಗುವುದೇ;*

ಇ) *ಹಾಗಿಲ್ಲದಿದ್ದಲ್ಲಿ, ಇಂತಹ ಭೂಮಿಗಳಲ್ಲಿ ಗ್ರಾಮೀಣ ಪ್ರದೇಶದ ಬಡ ಜನರು ಜೀವನ ನಡೆಸುತ್ತಿರುವುದರಿಂದ ಅವರಿಗೆ ಈ ಭೂಮಿಯನ್ನು ವಹಿಸಿಕೊಡುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಇಲ್ಲ

ಆ) ಅರಣ್ಯ ಭೂಮಿಯನ್ನು ಬೃಹತ್ ಉದ್ಯಮಿಗಳಿಗೆ ನೀಡುವ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಈ ಭೂಮಿಯನ್ನು ಅರಣ್ಯ ಬೆಳೆಸಲು, ಅಭಿವೃದ್ಧಿ ಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಇಲ್ಲ